ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಕೆ.ಆರ್.ವೃತ್ತ, ನೃಪತುಂಗ ರಸ್ತೆ, ಬೆಂಗಳೂರು -1.

ಸಂಖ್ಯೆ:ಎಂ3/ಪಿಎಂಪೋಷಣ್/ಅ.ಸಿ.ಕ.ಬಿ/E-1027909/2023-24 ದಿನಾಂಕ:06.12.2023

ಜ್ಞಾಪನ

ವಿಷಯ: ಪಿಎಂಪೋಷಣ್ (ಮಧ್ಯಾಹ್ನ ಉಪಹಾರ ಯೋಜನೆಯ) ಅಡಿ ಅಡುಗೆ ಸಿಬ್ಬಂದಿಯ ನೇಮಕಾತಿ ಮಾಡಿಕೊಡಲು ಅನುಮತಿಯನ್ನು ನೀಡುವ ಬಗ್ಗೆ.

ಉಲ್ಲೇಖ: ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ:11.10.2023 ರಂದು ನಡೆದ ಸಭೆಯ ನಡವಳಿ.

*****

ದಿನಾಂಕ:11.10.2023 ರಂದು ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯಂತೆ ಅಡುಗೆ ಸಿಬ್ಬಂದಿಯನ್ನು ಪ್ರತಿ ವರ್ಷ ಮಾರ್ಚ್ 31 ಕ್ಕೆ ಅಡುಗೆ ಕೆಲಸದಿಂದ ಕೈಬಿಟ್ಟು, ಮುಂದಿನ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಹಿಂದಿನ ವರ್ಷದಲ್ಲಿ ಅಡುಗೆ ಕೆಲಸ ನಿರ್ವಹಿಸಿದ್ದ ಸಿಬ್ಬಂದಿಯನ್ನೇ (60 ವರ್ಷ ವಯೋಮಿತಿ ಮೀರಿಲ್ಲದಿದ್ದಲ್ಲಿ ಹಾಗೂ ಯಾವುದೇ ದೂರುಗಳು ಇಲ್ಲದಿದ್ದಲ್ಲಿ ಮಾತ್ರ) ಅಡುಗೆ ಕೆಲಸಕ್ಕೆ ತೆಗೆದುಕೊಳ್ಳಲು ಸೂಚಿಸಿದೆ.

ಒಂದು ವೇಳೆ ಅಡುಗೆ ಸಿಬ್ಬಂದಿಗೆ 60 ವರ್ಷ ವಯೋಮಿತಿ ಮೀರಿದ್ದಲ್ಲಿ ಅವರ ಸ್ಥಳಕ್ಕೆ ಹೊಸದಾಗಿ ಅಡುಗೆ ಸಿಬ್ಬಂದಿಯನ್ನು ನಿಯಮಾನುಸಾರ ಆಯ್ಕೆ ಮಾಡಿಕೊಳ್ಳಲು ತಿಳಿಸಿದೆ.

ಕಾವೇರಿ.ಬಿ.ಬಿ. ಭಾ.ಆ.ಸೇ.<br>
ಆಯುಕ್ತರು,<br>
ಶಾಲಾ ಶಿಕ್ಷಣ ಇಲಾಖೆ,<br>
ಬೆಂಗಳೂರು-01

ಗೆ.

1. ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳು, ಪಿಎಂಪೋಷಣ್ (ಮಉಯೋ), ಜಿಲ್ಲಾ ಪಂಚಾಯತ್, ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಸಹಾಯಕ ನಿರ್ದೇಶಕರು, ಪಿಎಂಪೋಷಣ್ (ಮಉಯೋ), ತಾಲ್ಲೂಕು ಪಂಚಾಯತ್, ರವರಿಗೆ ಅಗತ್ಯ ಕ್ರಮಕ್ಕಾಗಿ.
3. ಕಛೇರಿ ಪ್ರತಿ.